<u>**ಕರ್ನಾಟಕ ಸರ್ಕಾರ**</u>

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,**
**6ನೇ ಅಡ್ಡರಸ್ತೆ,ಮಲ್ಲೇಶ್ವರಂ, ಬೆಂಗಳೂರು-560003**

**ಸಂಖ್ಯೆ:** ಕ.ಶಾ.ಪ&ಮೌ.ಮಂ/ದ್ವಿ.ಪಿ.ಪ್ರಾ.ಪ/2022-23. **ದಿನಾಂಕ**:19.12.2022

<u>**ಸುತ್ತೋಲೆ**</u>

<u>**ವಿಷಯ:**</u> ಫೆಬ್ರುವರಿ 2023ರ ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವ ಕುರಿತು.

*****

ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆಗಳನ್ನು ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರ ನೇತೃತ್ವದಲ್ಲಿ ಪ್ರತಿ ವರ್ಷ ನಡೆಸಲಾಗುತ್ತಿದ್ದಂತೆಯೇ 2022-23ರ ಶೈಕ್ಷಣಿಕ ಸಾಲಿನಲ್ಲಿಯೂ ಸಹ ಪ್ರಾಯೋಗಿಕ ಪರೀಕ್ಷೆಗಳನ್ನು 2023ರ ಫೆಬ್ರುವರಿ ಮಾಹೆಯಲ್ಲಿ ನಿಯಮಗಳಿಗೆ ಅನುಸಾರವಾಗಿ ನಡೆಸುವ ಸಂಪೂರ್ಣ ಜವಾಬ್ದಾರಿ ಆಯಾ ಜಿಲ್ಲಾ ಉಪನಿರ್ದೇಶಕರದ್ದಾಗಿರುತ್ತದೆ

ಪ್ರಾಯೋಗಿಕ ಪರೀಕ್ಷೆಗಳಿರುವ ವಿಷಯಗಳಲ್ಲಿ ವಿದ್ಯಾರ್ಥಿಗಳು ಗರಿಷ್ಠ ಅಂಕ ಪಡೆದು ತಾತ್ವಿಕ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳನ್ನು ಪಡೆಯುತ್ತಿರುವುದನ್ನು ಗಮನಿಸಲಾಗಿದೆ. ಇದು ಪ್ರಾಯೋಗಿಕ ಪರೀಕ್ಷೆಗಳ ಮೌಲ್ಯಮಾಪನದಲ್ಲಿ ಗೊಂದಲ ಹಾಗೂ ಸಂದೇಹಗಳನ್ನು ಸೃಷ್ಠಿಸುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದು 2022-23ರ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವಲ್ಲಿ ಈ ಕೆಳಗಿನ ಕಟ್ಟು ನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲು ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಚಿಸಿದೆ.

ಮಾನ್ಯ ನಿರ್ದೇಶಕರ ಆದೇಶದಂತೆ 2019ನೇ ಸಾಲಿನಿಂದ ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳಿಂದಲೇ ಆನ್‌ಲೈನ್ ಮುಖಾಂತರ ಇಲಾಖಾ ಸರ್ವರ್‌ಗಳಿಗೆ ಸಲ್ಲಿಸುವ ಪ್ರಕ್ರಿಯೆಗಳನ್ನು ಇಲಾಖೆ ಆಯೋಜಿಸಿದೆ.

ಸದರಿ ಪ್ರಕ್ರಿಯೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು/ಪ್ರಾಂಶುಪಾಲರು ತಮ್ಮ ಪರೀಕ್ಷಾ ಕೇಂದ್ರದಲ್ಲಿ ನಡೆಯಲಿರುವ 2023ನೇ ಸಾಲಿನ ಪ್ರಾಯೋಗಿಕ ಪರೀಕ್ಷೆಗೆ, ಕೆಳಗೆ ಸೂಚಿಸಿರುವ ತಾಂತ್ರಿಕ ವ್ಯವಸ್ಥೆಯನ್ನು ಮಾಡಲು ಸೂಚಿಸಿದೆ..

- ಪ್ರತಿ ವಿಷಯದ ಪ್ರಾಯೋಗಿಕ ಪರೀಕ್ಷಾ ಪ್ರಯೋಗಾಲಯಕ್ಕೆ ಅವಶ್ಯಕತೆಯಿರುವಷ್ಟು ಗಣಕ ಯಂತ್ರಗಳ ವ್ಯವಸ್ಥೆ ಮಾಡಿಕೊಳ್ಳುವುದು.
- 30mbps Internet speed ಕನೆಕ್ಟಿವಿಟಿಯನ್ನು ಪೂರ್ಣ ಪ್ರಮಾಣದಲ್ಲಿಪಡೆದುಕೊಳ್ಳುವುದು.
- ಒಂದು ಇಂಟರ್‌ನೆಟ್ Static IP Address ಅನ್ನು ನೆಟ್‌ವರ್ಕ್ ಪ್ರೊವೈಡರ್ ಮೂಲಕ ತೆಗೆದುಕೊಳ್ಳುವುದು. ಅಪ್‌ಡೇಟ್ ಆದ ನಂತರ ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.
- ನಿರಂತರ ವಿದ್ಯುತ್ ಪೂರೈಕೆಗಾಗಿ UPS ಯಂತ್ರದ ಸೌಲಭ್ಯ ವ್ಯವಸ್ಥೆ ಮಾಡಿಕೊಳ್ಳುವುದು.
- ಪ್ರಾಯೋಗಿಕ ಪರೀಕ್ಷಾ ಕೊಠಡಿಗಳಲ್ಲಿ ಗಣಕ ಯಂತ್ರ ಸೌಲಭ್ಯ ವ್ಯವಸ್ಥೆ ಮಾಡಿಕೊಳ್ಳುವುದು.
- ಪ್ರಾಯೋಗಿಕ ಪರೀಕ್ಷಾ ಕೊಠಡಿಗಳಲ್ಲಿರುವ ಗಣಕ ಯಂತ್ರಗಳ ಪರಸ್ಪರ ಸಂಪರ್ಕ ಲ್ಯಾನ್ ಕನೆಕ್ಟಿವಿಟಿಯ ಸೌಲಭ್ಯ ಕಲ್ಪಿಸುವುದು.
- ಕಡ್ಡಾಯವಾಗಿ ಎಲ್ಲಾ ಪ್ರಯೋಗಾಲಯಗಳಲ್ಲಿ ಸಿಸಿಟಿವಿ ಅಳವಡಿಸುವುದು ಮತ್ತು ಪರೀಕ್ಷಾ ದಿನಗಳಿಂದ ಅದು ಕಾರ್ಯ ನಿರ್ವಹಿಸುತ್ತಿರುವುದನ್ನ ದೃಢಪಡಿಸಿಕೊಳ್ಳುವುದು.

- ಎಲ್ಲಾ ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರು ತಮ್ಮ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವ User ID ಮತ್ತು Password ಅನ್ನು ಬಳಸಿ ಮಂಡಲಿಯ(https://sslc.karnataka.gov.in)ವೆಬ್‌ಸೈಟ್‌ನಲ್ಲಿ ನೀಡಲಾಗುವ ಲಿಂಕ್ '**click here to update static IP**' ಮುಖಾಂತರ ಪರೀಕ್ಷಾ ಕೇಂದ್ರದ static IP ಯ ವಿವರಗಳನ್ನು ದಿನಾಂಕ: 25-01-2023ರೊಳಗೆ ಕಡ್ಡಾಯವಾಗಿ ಅಪ್‌ಡೇಟ್ ಮಾಡಲು ಸೂಚಿಸಿದೆ.
- Static IP ಯ ವಿವರಗಳನ್ನು ಅಪ್‌ಡೇಟ್ ಮಾಡಿದ ನಂತರ ಮೇಲೆ ಸೂಚಿಸಿರುವ ಲಿಂಕ್‌ನಲ್ಲಿ ನೀಡಲಾಗುವ '**Test your static IP**' ಎಂಬ option ಮುಖಾಂತರ ಅದನ್ನು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳುವುದು.
- ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಆನ್ ಲೈನ್ ಮುಂಖಾತರ ಸಲ್ಲಿಸುವುದಕ್ಕೆ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರು/ಮುಖ್ಯಅಧೀಕ್ಷಕರು ಮಂಡಲಿಯ (https://sslc.karnataka.gov.in/) ವೆಬ್ ಸೈಟ್ ನಲ್ಲಿ ನೀಡಲಾಗುವ ಲಿಂಕ್ ಮುಂಖಾತರ ನೊಂದಾಯಿಸಿ ಮುಂದಿನ ಪ್ರಕ್ರಿಯೆಯನ್ನು ಪರೀಕ್ಷಾ ಸಮಯದಲ್ಲಿ ನೀಡಲಾಗುವ user manual ಪ್ರಕಾರ ನಿರ್ವಹಿಸುವುದು

ಎಲ್ಲಾ ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು/ಪ್ರಾಂಶುಪಾಲರು, ತಮ್ಮ ಪರೀಕ್ಷಾ ಕೇಂದ್ರದಲ್ಲಿ ಮೇಲೆ ಸೂಚಿಸಿರುವ ತಾಂತ್ರಿಕ ಉಪಕರಣಗಳ ಸೌಲಭ್ಯಗಳ ವ್ಯವಸ್ಥೆಯನ್ನು ಪರೀಕ್ಷೆಗೆ ಪೂರಕವಾಗಿ ಸಿದ್ಧತೆ ಮಾಡಿಕೊಳ್ಳಬೇಕು ಹಾಗೂ ಈ ಕೆಳಕಂಡ ಸೂಚನೆ ಮತ್ತು ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

1. ಪ್ರಾಯೋಗಿಕ ಪರೀಕ್ಷಾ ಕೇಂದ್ರದ ಎಲ್ಲಾ ಪ್ರಯೋಗಾಲಯಗಳಿಗೆ ಸಿಸಿಟಿವಿ ಕ್ಯಾಮರಾ ಕಡ್ಡಾಯವಾಗಿ ಅಳವಡಿಸುವುದು. ಪರೀಕ್ಷೆಯ ಎಲ್ಲಾ ಘಟನಾವಳಿಗಳನ್ನು ವಿಡಿಯೋ ಮೂಲಕ ದಾಖಲಿಸಿ ಸಂರಕ್ಷಿಸಿ, ಅವಶ್ಯವಿದ್ದಾಗ ಹಾಜರು ಪಡಿಸುವುದು.
2. ಪ್ರಾಯೋಗಿಕ ಪರೀಕ್ಷೆಯ ಜಿಲ್ಲಾ ಉಸ್ತುವಾರಿ ಸಮಿತಿಯ ಮುಖ್ಯಸ್ಥರು ಆಯಾ ಜಿಲ್ಲೆಯ ಪ್ರಾಚಾರ್ಯರು(ವಿಜ್ಞಾನ ವಿಷಯ)/ವಿಜ್ಞಾನ ವಿಭಾಗದ ಹಿರಿಯ ಉಪನ್ಯಾಸಕರಾಗಿರಬೇಕು. ಈ ಸಮಿತಿಯು ಜಿಲ್ಲೆಯ ಎಲ್ಲಾ ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿ ತಯಾರಿಸುವುದು ಹಾಗೂ ಆಂತರಿಕ ಮತ್ತು ಬಾಹ್ಯ ಪರೀಕ್ಷಕರ ನೇಮಕವನ್ನು ಪಾರದರ್ಶಕವಾಗಿ ಮಂಡಲಿಯ ನಿಯಮಗಳಿಗನುಸಾರವಾಗಿ ನೇಮಿಸಬೇಕು.
3. ಬಾಹ್ಯ ಪರೀಕ್ಷಕರ ನೇಮಕಾತಿ ಪಟ್ಟಿಯನ್ನು ಕಡ್ಡಾಯವಾಗಿ ಜಂಟಿನಿರ್ದೇಶಕರು(ಪರೀಕ್ಷೆ), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಬೆಂಗಳೂರು-03 ಇವರಿಗೆ ಸಲ್ಲಿಸುವುದು.
4. ಸೂಕ್ಷ್ಮ ಕೇಂದ್ರಗಳಿಗೆ ಹಾಗೂ ಅನುದಾನರಹಿತ ಕಾಲೇಜುಗಳಿಗೆ ಪ್ರಾಯೋಗಿಕ ಪರೀಕ್ಷೆಯ ಮುಖ್ಯ ಅಧೀಕ್ಷಕರನ್ನಾಗಿ ಸರ್ಕಾರಿ/ಅನುದಾನಿತ ಕಾಲೇಜಿನ ಪ್ರಾಚಾರ್ಯರು/ ಹಿರಿಯ ಉಪನ್ಯಾಸಕರನ್ನು ನೇಮಿಸುವುದು.
5. ಅನುದಾನರಹಿತ ಕಾಲೇಜುಗಳಿಗೆ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳನ್ನು ಬಾಹ್ಯ ಪರೀಕ್ಷಕರನ್ನಾಗಿ ನೇಮಕ ಮಾಡುವುದು.
6. ಪ್ರಾಯೋಗಿಕ ಪರೀಕ್ಷೆಯನ್ನು ನಿರ್ದಿಷ್ಟ ಪ್ರಯೋಗಗಳಿಗೆ ಮಾತ್ರ ಸೀಮಿತಗೊಳಿಸದೇ, ನಿಗದಿಪಡಿಸಿದ ಎಲ್ಲಾ ಪ್ರಯೋಗಗಳನ್ನೊಳಗೊಂಡಿರಬೇಕು.
7. ಬಾಹ್ಯ ಪರೀಕ್ಷಕರನ್ನಾಗಿ ನೇಮಕ ಮಾಡುವಾಗ ಮೊದಲ ಆದ್ಯತೆ ಸರ್ಕಾರಿ ಉಪನ್ಯಾಸಕರಿಗೆ, ನಂತರ ಅನುದಾನಿತ ಉಪನ್ಯಾಸಕರಿಗೆ, ಬಾಹ್ಯ ಪರೀಕ್ಷಕರ ಕೊರತೆ ಇದ್ದಲ್ಲಿ ಮಾತ್ರ ಅನುದಾನರಹಿತ ಉಪನ್ಯಾಸಕರನ್ನು ನೇಮಿಸಿಕೊಳ್ಳಬಹುದು. ಪರೀಕ್ಷಾ ಕೇಂದ್ರದಲ್ಲಿ ಬಾಹ್ಯ ಪರೀಕ್ಷಕರನ್ನು ನೇಮಕ ಮಾಡುವಾಗ ಪುನರಾವರ್ತನೆಯಾಗದಂತೆ ಕ್ರಮವಹಿಸುವುದು.

8. 2023ರ ಪ್ರಾಯೋಗಿಕ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಕಾಲೇಜಿನವರು, ಕಡ್ಡಾಯವಾಗಿ ಪ್ರವೇಶ ಪತ್ರವನ್ನು ವಿತರಿಸಲು ಸೂಚಿಸಿದೆ.
9. 2023ರ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವ ಪರೀಕ್ಷಾ ಕೇಂದ್ರದವರು ಪ್ರತಿ ವಿಷಯಕ್ಕೆ, ಪ್ರತಿ ತಂಡಕ್ಕೆ ನೀಡಿರುವ ಅನುಬಂಧದಲ್ಲಿ ಮಾಹಿತಿಯನ್ನು ಭರ್ತಿಮಾಡಿ ಉತ್ತರಪತ್ರಿಕೆಗಳ ಜೊತೆಗೆ ಕಡ್ಡಾಯವಾಗಿ ಮಂಡಲಿಗೆ ಸಲ್ಲಿಸಲು ಸೂಚಿಸಿದೆ.
10. ಯಾವುದೇ ಕಾರಣಕ್ಕೂ ಎರಡು ಪರೀಕ್ಷಾ ಕೇಂದ್ರಗಳ ಉಪನ್ಯಾಸಕರನ್ನು ಪರಸ್ಪರ ಬದಲಾಯಿಸಿ ಪರೀಕ್ಷಕರನ್ನಾಗಿ ನೇಮಕ ಮಾಡಿಕೊಳ್ಳಬಾರದು.
11. ದ್ವಿತೀಯ ಪಿಯುಸಿ ವಿಜ್ಞಾನ ವಿಷಯಗಳ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಒಬ್ಬರು ಬಾಹ್ಯ ಪರೀಕ್ಷಕರು ಮತ್ತು ಒಬ್ಬರು ಆಂತರಿಕ ಪರೀಕ್ಷಕರನ್ನು ಜಿಲ್ಲಾ ಉಪನಿರ್ದೇಶಕರುಗಳು ನೇಮಕ ಮಾಡುತ್ತಾರೆ. ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಕಾಲೇಜಿನವರು ಆಯಾ ಕಾಲೇಜುಗಳಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ತಾತ್ವಿಕ ಪರೀಕ್ಷೆಗೆ ಮೊದಲೇ ನಡೆಸಬೇಕು.
12. ಪರೀಕ್ಷಕರು ಅನಾವಶ್ಯಕವಾಗಿ ವಿದ್ಯಾರ್ಥಿಗಳ ಜೊತೆ ಮಾತನಾಡಬಾರದು. ಪ್ರಾಯೋಗಿಕ ಪರೀಕ್ಷೆ ನಡೆಸುವ ಸಮಯದಲ್ಲಿ ಪ್ರಯೋಗಾಲಯದಲ್ಲಿ ಆಂತರಿಕ/ಬಾಹ್ಯ ಪರೀಕ್ಷಕರು ಮಾತ್ರ ಇರಬೇಕು. ಪರೀಕ್ಷಾ ಸಮಯದಲ್ಲಿ ಯಾವುದೇ ಕಾರಣಕ್ಕೂ ಪ್ರಯೋಗಾಲಯದ ಸಹಾಯಕರು ಮತ್ತು ಇತರ ಅನಧಿಕೃತ ವ್ಯಕ್ತಿಗಳಿಗೆ ಪ್ರಯೋಗಾಲಯದಲ್ಲಿ ಪ್ರವೇಶ ನೀಡುವಂತಿಲ್ಲ.
13. ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯ ಎಲ್ಲಾ ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡುವುದು ಹಾಗೂ ಸೂಕ್ಷ್ಮ ಕೇಂದ್ರಗಳಿಗೆ ಹೆಚ್ಚು ಭಾರಿ ಭೇಟಿ ನೀಡುವುದು.
14. ಪ್ರಾಯೋಗಿಕ ಪರೀಕ್ಷೆಗಳಿಗೆ ಪ್ರಶ್ನೆಗಳನ್ನು ನೀಡುವಾಗ ಇಬ್ಬರೂ ಪರೀಕ್ಷಕರು ಸಮಾಲೋಚಿಸಿ, ಲಾಟರಿ ಮೂಲಕ ವಿದ್ಯಾರ್ಥಿಗಳಿಗೆ ನೀಡಿ ಆ ಪ್ರಯೋಗಗಳನ್ನು ಮಾಡುವಂತೆ ಸೂಚಿಸುವುದು.
15. ಪರೀಕ್ಷಕರು ಅಂಕಗಳನ್ನು ನೀಡಿದ ಬಳಿಕ ವಿದ್ಯಾರ್ಥಿಗಳಿಗೆ ಅದನ್ನು ಬಹಿರಂಗಪಡಿಸದೇ ಗೌಪ್ಯತೆಯನ್ನು ಕಾಪಾಡುವುದು.
16. ಪ್ರಾಯೋಗಿಕ ಪರೀಕ್ಷಾ ಕೇಂದ್ರದಲ್ಲಿ ಮೌಲ್ಯಮಾಪಕರು ನೀಡಿರುವ ಅಂಕಗಳೇ ಅಂತಿಮವಾದ್ದರಿಂದ ಸರಿಯಾದ ಅಂಕಗಳನ್ನು ನಮೂದಿಸಿ ಕಳುಹಿಸುವುದು. ಪ್ರಾಯೋಗಿಕ ಪರೀಕ್ಷೆಯ ವಿಷಯಗಳ ಉತ್ತರ ಪತ್ರಿಕೆಗಳ ಫೋಟೋಪ್ರತಿ ಕೊಡುವ ವ್ಯವಸ್ಥೆ ಹಾಗೂ ಮರುಮೌಲ್ಯಮಾಪನ ಇರುವುದಿಲ್ಲ.
17. ಸರ್ಕಾರದ ಆದೇಶ ಸಂಖ್ಯೆ: ಇಪಿ 40 ಟಿಪಿಯು 2022, ಬೆಂಗಳೂರು, ದಿನಾಂಕ: 14-06-2022 ರಂತೆ, ದೃಷ್ಟಿದೋಷ, ದೃಷ್ಟಿಮಾಂದ್ಯ ಹಾಗೂ ಕ್ಷೀಣದೃಷ್ಟಿ ವಿದ್ಯಾರ್ಥಿಗಳಿಗೆ ಪ್ರಯೋಗಕ್ಕೆ ಬದಲಾಗಿ ಸಮನಾದ ಅಂಕವುಳ್ಳ ಸಂಭಂದಿಸಿದ ವಿಷಯದ ಪ್ರಶ್ನೆಯೊಂದಿಗೆ ತಾತ್ವಿಕ ಪತ್ರಿಕೆಯನ್ನು ಒದಗಿಸಿ ಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಬೇಕು.
18. ಪೂರಕ ಪರೀಕ್ಷೆಯಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದಿಲ್ಲ. ವಿದ್ಯಾರ್ಥಿಯು ವಾರ್ಷಿಕ ಪರೀಕ್ಷೆಯಲ್ಲಿ ಪಡೆದ ಪ್ರಾಯೋಗಿಕ ಅಂಕಗಳೇ ಅಂತಿಮ. ವಿದ್ಯಾರ್ಥಿಯು ತಾತ್ವಿಕ ವಿಷಯದಲ್ಲಿ ಉತ್ತೀರ್ಣರಾಗುವವರೆಗೂ ಈ ಪ್ರಾಯೋಗಿಕ ಅಂಕಗಳೇ ಅನ್ವಯವಾಗುತ್ತವೆ.
19. ಸಿದ್ಧಪಡಿಸಿದ ವೇಳಾಪಟ್ಟಿಯಂತೆ ಕಾಲೇಜಿನಲ್ಲಿ ನಿಗದಿತ ತಂಡದಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲಾಗುವುದು. ಪರೀಕ್ಷಾ ಕೇಂದ್ರದಲ್ಲಿ ನಿಗದಿಪಡಿಸಲಾದ ತಂಡಗಳಲ್ಲಿ ವಿದ್ಯಾರ್ಥಿಗಳಿಗೆ ಆಂತರಿಕ ಬದಲಾವಣೆಗೆ ಅವಕಾಶವಿರುವುದಿಲ್ಲ.
20. ಪ್ರತಿ ದಿವಸ ಪ್ರತಿ ತಂಡದಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವಾಗ ಬಾಹ್ಯ ಮತ್ತು ಆಂತರಿಕ ಪರೀಕ್ಷಕರು ಅರ್ಧ ಗಂಟೆ ಮೊದಲೇ ಹಾಜರಿರಲು ಸೂಚಿಸಿದೆ. ಯಾವುದೇ ಕಾರಣಕ್ಕೂ

ಒಬ್ಬರೇ ಪರೀಕ್ಷೆಯನ್ನು ನಡೆಸಬಾರದು. ಬಾಹ್ಯಪರೀಕ್ಷಕರು ಗೈರುಹಾಜರಾದಲ್ಲಿ ಜಿಲ್ಲಾ ಉಪನಿರ್ದೇಶಕರು / ಪರೀಕ್ಷಾ ಸಮಿತಿಯ ಸಂಚಾಲಕರನ್ನು ಕೂಡಲೇ ಸಂಪರ್ಕಿಸುವುದು

21. ನಿಗದಿಪಡಿಸಿದ ವೇಳಾಪಟ್ಟಿ ಮತ್ತು ತಂಡಗಳಲ್ಲಿ ವಿದ್ಯಾರ್ಥಿಗಳು ಯಾವುದಾದರೂ ಕಾರಣಕ್ಕಾಗಿ ಗೈರುಹಾಜರಾದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪ್ರತ್ಯೇಕ ತಂಡಗಳಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಅವಕಾಶವಿಲ್ಲ.
22. ವಿದ್ಯಾರ್ಥಿಯು ವಾರ್ಷಿಕ ಪರೀಕ್ಷೆಯ ತಾತ್ವಿಕ ಮತ್ತು ಪ್ರಾಯೋಗಿಕ ಪರೀಕ್ಷೆಯ ಎಲ್ಲಾ ವಿಷಯಗಳಿಗೆ ಗೈರುಹಾಜರಾಗಿದ್ದು, ಸದರಿ ವರ್ಷದ ಪೂರಕ ಪರಿಕ್ಷೆಯಲ್ಲಿ ಎಲ್ಲಾ ವಿಷಯದಲ್ಲಿ ಗೈರುಹಾಜರಾಗಿದ್ದಲ್ಲಿ ಮಾತ್ರ ತಕ್ಷಣದ ಮುಂದಿನ ವರ್ಷದಲ್ಲಿ ಬರುವ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಬಹುದು. ವಿದ್ಯಾರ್ಥಿಯು ಪ್ರಥಮ ಬಾರಿಗೆ ವಾರ್ಷಿಕ ಪರೀಕ್ಷೆಯ ತಾತ್ವಿಕ ಮತ್ತು ಪ್ರಾಯೋಗಿಕ ಪರೀಕ್ಷೆಯ ಎಲ್ಲಾ ವಿಷಯಗಳಿಗೂ ಗೈರುಹಾಜರಾಗಿದ್ದು ತದ ನಂತರ ಪೂರಕ ಪರೀಕ್ಷೆಯಲ್ಲಿ ಆ ವಿದ್ಯಾರ್ಥಿ ಯಾವುದಾದರೂ ಒಂದು ಅಥವಾ ಹೆಚ್ಚಿನ ವಿಷಯಗಳ ತಾತ್ವಿಕ ಪರೀಕ್ಷೆಗೆ ಹಾಜರಾದರೆ, ಆ ವಿದ್ಯಾರ್ಥಿಗೆ ಮುಂದಿನ ಪ್ರಾಯೋಗಿಕ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
23. ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರು ಉಪನಿರ್ದೇಶಕರ ನಿರ್ದೇಶನದಂತೆ ಪ್ರಾಯೋಗಿಕ ಪರೀಕ್ಷೆಗಳನ್ನು ನಿಗದಿತ ಪರೀಕ್ಷಾ ಕೇಂದ್ರಗಳಲ್ಲಿ ನಡೆಸುವುದು. ವಿದ್ಯಾರ್ಥಿಗಳನ್ನಾಗಲೀ, ಪೋಷಕರನ್ನಾಗಲೀ ಮಾಹಿತಿ ಪಡೆದುಕೊಳ್ಳಲು ಅಥವಾ ಸಂಶಯ ನಿವಾರಿಸಿಕೊಳ್ಳಲು ಮಂಡಲಿಗೆ ಕಳುಹಿಸಬಾರದು. ಯಾವುದೇ ಮಾಹಿತಿ ವಿದ್ಯಾರ್ಥಿಗಳಿಗೆ ಬೇಕಾದಲ್ಲಿ ಕಾಲೇಜಿನ ಹಂತದಲ್ಲೇ ಒದಗಿಸಬೇಕು.
24. ಪ್ರತಿ ಕಾಲೇಜಿನಿಂದ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲಿರುವ ವಿದ್ಯಾರ್ಥಿಗಳ ವಿದ್ಯಾರ್ಥಿ ಸಂಖ್ಯೆಯನ್ನೊಳಗೊಂಡ ಪಟ್ಟಿಯನ್ನು ಮತ್ತು ಮಾರ್ಕ್ಸ್ ಲಿಸ್ಟ್ ಗಳನ್ನು ನೇರವಾಗಿ ಪರೀಕ್ಷಾ ಕೇಂದ್ರಗಳಿಗೆ ಆನ್‌ಲೈನ್ ಮೂಲಕ ಕಳುಹಿಸಲಾಗುವುದು. ಈ ರೀತಿ ಕಳುಹಿಸಲಾದ 12 ವಿದ್ಯಾರ್ಥಿಗಳ ವಿದ್ಯಾರ್ಥಿ ಸಂಖ್ಯೆಯನ್ನೊಳಗೊಂಡ ಮಾರ್ಕ್ಸ್ ಲಿಸ್ಟ್ ಗಳನ್ನು ಮುದ್ರಿಸಿಕೊಂಡು, ಅದೇ ಕ್ರಮದಲ್ಲಿ ಪ್ರಾಯೋಗಿಕ ಪರೀಕ್ಷೆಯ ತಂಡವನ್ನು ರಚಿಸಿಕೊಳ್ಳುವುದು. ಈ ಬಗ್ಗೆ PUX-1ರ ನಮೂನೆಯಲ್ಲಿ ಅಂದರೆ ಪ್ರಾಯೋಗಿಕ ಪರೀಕ್ಷಕರ ದಿನಚರಿಯಲ್ಲಿ ಮಾಹಿತಿಗಳನ್ನು ನಮೂದಿಸುವುದು. ನಮೂನೆಯನ್ನು ಪ್ರತೀ ತಂಡಕ್ಕೆ ಒಂದರಂತೆ ಪ್ರತ್ಯೇಕವಾಗಿ ಉಪಯೋಗಿಸುವುದು.
25. ಪ್ರಾಯೋಗಿಕ ಪರೀಕ್ಷೆ ನಡೆಸುವಾಗ ಪ್ರತಿದಿನ 09 ರಿಂದ 11 ಗಂಟೆ, 12 ರಿಂದ 02 ಗಂಟೆ ಮತ್ತು 03 ರಿಂದ 05 ಗಂಟೆಯವರೆಗೆ ಮೂರು ತಂಡಗಳಲ್ಲಿ ಪರೀಕ್ಷೆಗಳನ್ನು ನಡೆಸಬಹುದೆಂದು ಸೂಚಿಸಲಾಗಿದೆ. ಈ ಬಗ್ಗೆ ಪ್ರಾಯೋಗಿಕ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಕ್ರೂಢೀಕೃತ ಕಾರ್ಯನಿರ್ವಹಣಾ ವಿವರಣಾ ಪಟ್ಟಿ PUX-3ರ ನಮೂನೆಯಲ್ಲಿ ಮಾಹಿತಿಗಳನ್ನು ನಮೂದಿಸುವುದು.
26. ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ವಿದ್ಯಾರ್ಥಿಯು PRACTICAL RECORD ಅನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು. ಇದರಲ್ಲಿ ಸಂಬಂಧಿಸಿದ ಉಪನ್ಯಾಸಕರ / ವಿಭಾಗದ ಮುಖ್ಯಸ್ಥರ / ಪ್ರಾಚಾರ್ಯರ ದೃಢೀಕರಿಸಿದ ಪ್ರಮಾಣ ಪತ್ರವಿರಬೇಕು.
27. ಪ್ರಾಯೋಗಿಕ ಪರೀಕ್ಷೆಯಲ್ಲಿ ಸರಳ ಕ್ಯಾಲ್ಕುಲೇಟರನ್ನು ಮಾತ್ರ ಉಪಯೋಗಿಸಲು ಅವಕಾಶ ನೀಡಿದೆ. ಪ್ರಾಯೋಗಿಕ ಪರೀಕ್ಷೆಯಲ್ಲಿ ಪ್ರಾಯೋಗಿಕ ಮ್ಯಾನ್ಯುಯಲ್, ಕ್ಯಾಲ್ಕುಲೇಟರ್ ಮತ್ತು ಮೊಬೈಲ್‌ಫೋನ್ ಮುಂತಾದ ಇಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ.

28. ಪ್ರಾಯೋಗಿಕ ಪರೀಕ್ಷೆಯಲ್ಲಿ ಸೂಚನೆಯಂತೆ ಹಾಗೂ ಅಂಕಪಟ್ಟಿಯಂತೆ ತಂಡಗಳನ್ನು ಮಾಡಿ ವೇಳಾಪಟ್ಟಿಯನ್ನು ನೀಡಿದ ನಂತರ ನಿಗದಿತ ತಂಡದ ವಿದ್ಯಾರ್ಥಿಗಳ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
29. ಪ್ರಾಯೋಗಿಕ ಪರೀಕ್ಷೆಯ ಉತ್ತರ ಪತ್ರಿಕೆಯ ಮೌಲ್ಯಮಾಪನವನ್ನು ಇಬ್ಬರು ಮೌಲ್ಯಮಾಪಕರು ಸಮಾಲೋಚಿಸಿ ಮೌಲ್ಯಮಾಪನ ಮಾಡಬೇಕು. ಅಂಕಪಟ್ಟಿಗೆ ಇಬ್ಬರು ಸಹಿ ಹಾಕಬೇಕು. ಸದರಿ ಅಂಕಗಳನ್ನು ಮೌಲ್ಯಮಾಪನ ಮಾಡಿದ ದಿನವೇ ಆನ್‌ಲೈನ್‌ನಲ್ಲಿ ಕಡ್ಡಾಯವಾಗಿ ನಮೂದಿಸುವುದು. ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆ ಮತ್ತು ಸಹಿ ಮಾಡಿ ದೃಢೀಕರಿಸಿರುವ ಅಂಕಪಟ್ಟಿಗಳನ್ನು ಪ್ರತ್ಯೇಕವಾದ ಲಕೋಟೆಗಳಲ್ಲಿ ಸೀಲ್ ಮಾಡಿದ ನಂತರ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು/ಪ್ರಾಚಾರ್ಯರಿಗೆ ಸಲ್ಲಿಸಿ ಅವರಿಂದ ಕಾರ್ಯನಿರ್ವಹಣಾ ಪುಸ್ತಕದಲ್ಲಿ ಸ್ವೀಕೃತಿ ಪಡೆಯುವುದು. ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಪ್ರತಿ ದಿವಸ ಪ್ರತಿ ವಿಷಯದಲ್ಲಿ ನಡೆದ ಪ್ರಾಯೋಗಿಕ ಪರೀಕ್ಷಾ ಅಂಕಪಟ್ಟಿಗಳನ್ನು ಮತ್ತು ಉತ್ತರ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಮೊಹರು ಮಾಡಿದ ಲಕೋಟೆಯಲ್ಲಿ ಪರೀಕ್ಷಕರಿಂದ ಪಡೆದು ಅದನ್ನು ಸುರಕ್ಷಿತವಾಗಿ ಸಂರಕ್ಷಿಸುವುದು.
30. ಪ್ರಾಯೋಗಿಕ ಪರೀಕ್ಷಾ ಕೇಂದ್ರದಲ್ಲಿ ಆಂತರೀಕ ಮತ್ತು ಬಾಹ್ಯ ಪರೀಕ್ಷಕರು ಎಲ್ಲಾ ತಂಡಗಳ ಪರೀಕ್ಷೆಗಳನ್ನು ಮುಗಿಸಿದ ನಂತರ ಅವರುಗಳಿಗೆ PUX-4ರ ನಮೂನೆಯಲ್ಲಿ ಹಾಜರಾತಿ ಪ್ರಮಾಣ ಪತ್ರಗಳನ್ನು ನೀಡಿ ಕರ್ತವ್ಯದಿಂದ ಬಿಡುಗಡೆಗೊಳಿಸುವುದು.
31. 2016-17ನೇ ಸಾಲಿನಿಂದ ರಾಜ್ಯದ ಆಯ್ದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ NSQF ಯೋಜನೆ ವೃತ್ತಿ ಶಿಕ್ಷಣ ಪಠ್ಯ ಕ್ರಮದಲ್ಲಿ ಮಾಹಿತಿ ತಂತ್ರಜ್ಞಾನ, ಆಟೋಮೊಬೈಲ್, ಹೆಲ್ತ್ ಕೇರ್, ರೀಟೈಲ್ ಹಾಗೂ ಬ್ಯೂಟಿ ಮತ್ತು ವೆಲ್‌ನೆಸ್ ವಿಷಯಗಳನ್ನು ಅನುಷ್ಠಾನಗೊಳಿಸಿದೆ. ಈ ವಿಷಯಗಳನ್ನು ಇಲಾಖೆಯ ನಿಯಮಗಳಿಗನುಸಾರವಾಗಿ ಪರೀಕ್ಷೆ ನಡೆಸುವಂತೆ ಸೂಕ್ತ ಕ್ರಮವಹಿಸಲು ಸೂಚಿಸಿದೆ.
32. ಫ್ರೆಂಚ್ ಭಾಷಾ ವಿಷಯದ ತಾತ್ವಿಕ ಹಾಗೂ ಮೌಖಿಕ (Oral) ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ತಾತ್ವಿಕ ಹಾಗೂ ಮೌಖಿಕ (Oral) ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ಮೌಖಿಕ (Oral) ಪರೀಕ್ಷೆಯಲ್ಲಿ ಗರಿಷ್ಠ 20 ಅಂಕಗಳಿಗೆ ವಿದ್ಯಾರ್ಥಿಗಳು ಉತ್ತೀರ್ಣರಾಗಲು ಕನಿಷ್ಠ 06 ಅಂಕಗಳನ್ನು, ತಾತ್ವಿಕ ಪರೀಕ್ಷೆಯಲ್ಲಿ ಗರಿಷ್ಠ 80 ಅಂಕಗಳಿಗೆ ವಿದ್ಯಾರ್ಥಿಗಳು ಉತ್ತೀರ್ಣರಾಗಲು ಕನಿಷ್ಠ 24 ಅಂಕಗಳನ್ನು ಪಡೆಯಬೇಕಾಗಿರುತ್ತದೆ. ತಾತ್ವಿಕಮತ್ತು ಮೌಖಿಕ ಪರೀಕ್ಷೆಗಳು ಎರಡು ಸೇರಿ ಪ್ರತಿ ವಿಷಯಕ್ಕೆ ಪಡೆಯಬೇಕಾದ ಕನಿಷ್ಠ ಅಂಕಗಳು(Paper minimum) 30. ಏಕಕಾಲದಲ್ಲಿ ತಾತ್ವಿಕ ಮತ್ತು ಮೌಖಿಕ ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕು

**ಪ್ರಾಯೋಗಿಕ ಪರೀಕ್ಷೆಯ ಅಂಕಪಟ್ಟಿ ಮತ್ತು ಉತ್ತರ ಪತ್ರಿಕೆ ಬಂಡಲುಗಳನ್ನು ಕಳುಹಿಸುವ ಬಗ್ಗೆ :**

ಪರೀಕ್ಷಾ ಕೇಂದ್ರದಲ್ಲಿ ಪ್ರಾಯೋಗಿಕ ಪರೀಕ್ಷೆಗಳು ಪೂರ್ಣವಾಗಿ ಮುಗಿದ ನಂತರ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ವಿಷಯವಾರು, ತಂಡವಾರು ಮೊಹರು ಮಾಡಿದ ಅಂಕಪಟ್ಟಿಗಳ ಲಕೋಟೆಗಳನ್ನು ಜೋಡಿಸಿಕೊಳ್ಳುವುದು. ಪ್ರತಿ ವಿಷಯದಲ್ಲಿ ಪ್ರತಿದಿನ ನಡೆದ ತಂಡಗಳ ಎಲ್ಲಾ ಅಂಕಪಟ್ಟಿಗಳನ್ನು ಲಕೋಟೆಯಲ್ಲಿ ಇರಿಸಿ ಲಕೋಟೆಯ ಮೇಲೆ ವಿಷಯ ಬರೆದು ಇಬ್ಬರೂ ಪರೀಕ್ಷಕರು ಮೊಹರು ಮಾಡುವುದು. ಪ್ರತಿ ವಿಷಯಕ್ಕೂ ಪ್ರತ್ಯೇಕವಾಗಿ ಇದೇ ರೀತಿ ಮೊಹರು ಮಾಡಿದ ಲಕೋಟೆಯ ಮೇಲೆ ಆಂತರೀಕ ಮತ್ತು ಬಾಹ್ಯ ಪರೀಕ್ಷಕರು ಕನಿಷ್ಠ ಆರು ಸಹಿಗಳನ್ನು ಹಾಕಬೇಕು. ಈ ರೀತಿ ಮಾಡಲಾದ ಎಲ್ಲಾ ವಿಷಯಗಳ ಲಕೋಟೆಗಳನ್ನು ಮುಖ್ಯ ಅಧೀಕ್ಷಕರು ತಮ್ಮ ವಶದಲ್ಲಿಟ್ಟುಕೊಂಡು ಎಲ್ಲಾ ವಿಷಯಗಳ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ನಂತರ ವಿಷಯವಾರು, ಕೋರಾ ಬಟ್ಟೆಯಲ್ಲಿ

ಬಂಡಲ್ ಮಾಡಿ ಸೀಲ್ ಮಾಡಿ ತಮ್ಮ ಪರೀಕ್ಷಾ ಕೇಂದ್ರದ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಮರುದಿನ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಈ ಕೆಳಗೆ ತಿಳಿಸಿರುವ ವಿವರಗಳನ್ನು ಬರೆದು ನೀಡುವುದು. ಪ್ರಾಯೋಗಿಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಉತ್ತರಿಸಿದ ಉತ್ತರ ಪತ್ರಿಕೆಗಳನ್ನು ವಿಷಯವಾರು, ಕೋರಾ ಬಟ್ಟೆಯಲ್ಲಿ ಬಂಡಲ್ ಮಾಡಿ ಪೂರ್ಣ ವಿವರಗಳನ್ನು ಬಂಡಲ್ ಮೇಲೆ ಬರೆದು ಖುದ್ದಾಗಿ **ನಿರ್ದೇಶಕರು(ಪರೀಕ್ಷೆಗಳು), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03** ವಿಳಾಸಕ್ಕೆ ಪರೀಕ್ಷೆ ಮುಗಿದ ತಕ್ಷಣ ಕಳುಹಿಸಿಕೊಡುವುದು. ಮುಂದೆ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆಯ ಅಂಕಗಳನ್ನು ಪರಿಶೀಲಿಸಲು ಈ ಉತ್ತರ ಪತ್ರಿಕೆಗಳು ಅವಶ್ಯಕವಾಗಿ ಬೇಕಾಗಿರುವುದರಿಂದ ಎಲ್ಲಾ ವಿದ್ಯಾರ್ಥಿಗಳ ವಿಷಯವಾರು ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿ ದೃಢೀಕರಿಸಿ ಕಳುಹಿಸಿಕೊಡುವುದು.

**ಅಂಕಪಟ್ಟಿ ಬಂಡಲ್‌ನ ಮೇಲೆ ಬರೆಯಬೇಕಾದ ವಿವರಗಳು :**

1. "**2023ರ ಪ್ರಾಯೋಗಿಕ ಪರೀಕ್ಷೆಯ ಅಂಕಗಳ ಲಕೋಟೆ**" ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.
2. ಪರೀಕ್ಷೆ ನಡೆಸಿದ ಕಾಲೇಜಿನ ಹೆಸರು ಮತ್ತು ವಿಳಾಸ, ಪರೀಕ್ಷಾ ಕೇಂದ್ರ ಸಂಖ್ಯೆ: PC No ..........
3. ಪರೀಕ್ಷಾ ಕೇಂದ್ರವಾಗಿರುವ ಕಾಲೇಜಿನ ಸಂಕೇತ ಸಂಖ್ಯೆ: College Code No. ...................
4. ಪರೀಕ್ಷಾ ಕೇಂದ್ರಕ್ಕೆ ಲಗತ್ತಿಸಿರುವ (Tagged) ಕಾಲೇಜಿನ ಸಂಕೇತ ಸಂಖ್ಯೆ: College Code No. ...................
5. ಬಂಡಲ್‌ನಲ್ಲಿ ಇರಿಸಿರುವ ಲಕೋಟೆಗಳು, ಸಂಬಂಧಿಸಿದ ವಿಷಯಗಳ ವಿವರ ಮತ್ತು ವಿಷಯವಾರು ಲಕೋಟೆಗಳ ಸಂಖ್ಯೆ: ...........................

ಉಪಯೋಗಿಸದ ಪ್ರಾಯೋಗಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಬೇರೆ ಬಂಡಲ್ ಮಾಡಿ ಜಿಲ್ಲಾ ಉಪನಿರ್ದೇಶಕರಿಗೆ ಕಳುಹಿಸಿಕೊಡಲು ಸೂಚಿಸಿದೆ.

ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಮೂರು ದಿನಗಳೊಳಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03, ಇಲ್ಲಿಗೆ ಪ್ರಾಯೋಗಿಕ ಪರೀಕ್ಷಾ ಕೇಂದ್ರದಿಂದ ಪಡೆದ ಅಂಕಪಟ್ಟಿಗಳ ಲಕೋಟೆಗಳನ್ನು ಹಾಗೂ ಉಪಯೋಗಿಸದ ಉತ್ತರ ಪತ್ರಿಕೆ ಬಂಡಲ್‌ಗಳನ್ನು ಕಳುಹಿಸಿಕೊಡಲು ಸೂಚಿಸಿದೆ.

2023ರ ಪ್ರಾಯೋಗಿಕ ಪರೀಕ್ಷೆಯಲ್ಲಿ ಮಂಡಲಿಯಿಂದ ನೀಡಲಾಗಿರುವ ಅಂಕಪಟ್ಟಿಗಳಲ್ಲಿ ಮುದ್ರಿತವಾಗಿಲ್ಲದ ವಿದ್ಯಾರ್ಥಿಗಳಿಗೆ **ಮ್ಯಾನ್ಯುಯಲ್ ಅಂಕಪಟ್ಟಿಗಳನ್ನು** ಸಿದ್ಧಪಡಿಸಿ, ಪ್ರತ್ಯೇಕ ಲಕೋಟೆಯಲ್ಲಿರಿಸಿ ಲಕೋಟೆಯ ಮೇಲ್ಭಾಗ ಮ್ಯಾನ್ಯುಯಲ್ ಅಂಕಪಟ್ಟಿ ಎಂದು ಕಡ್ಡಾಯವಾಗಿ ನಮೂದಿಸಿ, ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು. ನಂತರ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯ ಮ್ಯಾನ್ಯುಯಲ್ ಅಂಕಪಟ್ಟಿಗಳನ್ನು ಕ್ರೂಢೀಕರಿಸಿ, ನಿರ್ದೇಶಕರು(ಪರೀಕ್ಷೆ), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಗೆ ಸಲ್ಲಿಸುವುದು.

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡ ನಂತರ ಪ್ರಾಯೋಗಿಕ ಪರೀಕ್ಷೆಯ ಫಲಿತಾಂಶದಲ್ಲಿ ನ್ಯೂನತೆಗಳಿದ್ದಲ್ಲಿ ಹತ್ತು ದಿನಗಳೊಳಗೆ ಪೂರಕವಾದ ದಾಖಲೆಗಳೊಂದಿಗೆ ಮಂಡಲಿಯನ್ನು ಸಂಪರ್ಕಿಸಲು ಸಂಬಂಧ ಪಟ್ಟ ಕಾಲೇಜಿನ ಪ್ರಾಚಾರ್ಯರಿಗೆ ಸೂಚಿಸಲು ತಿಳಿಸಿದೆ. ಯಾವುದೇ ಕಾರಣಕ್ಕೂ ವಿದ್ಯಾರ್ಥಿಯನ್ನಾಗಲಿ ಅಥವಾ ಅವರ ಪೋಷಕರನ್ನಾಗಲಿ ಮಂಡಲಿಗೆ ಕಳುಹಿಸಬಾರದು.

ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆಗಳಲ್ಲಿ ಯಾವುದೇ ಲೋಪ/ ದೂರುಗಳಿದ್ದಲ್ಲಿ ಜಿಲ್ಲಾ ಉಪನಿರ್ದೇಶಕರೇ ನೇರ ಹೊಣೆಗಾರರಾಗುತ್ತಾರೆ ಮತ್ತು ನಿಯಮಾನುಸಾರ ಮಂಡಲಿಯು ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸುತ್ತದೆ.

ಆನ್‌ಲೈನ್ ಪ್ರಕ್ರಿಯೆಯಲ್ಲಿ ಯಾವುದೇ ತಾಂತ್ರಿಕ ಸಮಸ್ಯೆ ಎದುರಾದಲ್ಲಿ ಈ ಕೆಳಗೆ ಸೂಚಿಸಿರುವ ಗಣಕ ಶಾಖೆಯ ಅಧಿಕಾರಿಗಳು/ಸಿಬ್ಬಂದಿಗಳ ದೂರವಾಣಿ ಸಂಖ್ಯೆಗಳನ್ನು ಕಚೇರಿ ಸಮಯದಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 05.30ರವರೆಗೆ ಸಂಪರ್ಕಿಸಲು ಸೂಚಿಸಿದೆ.

| ಕ್ರ.ಸಂ | ವಿಭಾಗ | ಹೆಸರುಮತ್ತುದೂರವಾಣಿಸಂಖ್ಯೆ |
|---|---|---|
| 1 | ಬೆಂಗಳೂರು | ಶ್ರೀ ಬಾಲಾಜಿ ಪಿ.ವೈ, ದ್ವಿದಸ<br>ಮೊ: 9886082073 |
| 2 | ಮೈಸೂರು | ಶ್ರೀಮತಿ ಸುಮಯ್ಯಾತಾಜ್ ಎನ್,<br>ಶಾಖಾಧಿಕಾರಿಗಳು<br>ಮೊ: 9731863274 |
| 3 | ಬೆಳಗಾವಿ | ಶ್ರೀಮತಿ ಆಶಾರಾಣಿ,<br>ಶಾಖಾಧಿಕಾರಿಗಳು<br>ಮೊ: 9480094262 |
| 4 | ಗುಲ್ಬರ್ಗ | ಶ್ರೀ ಗಿರೀಶ್ ಪಿ.ಎಸ್,<br>ಶಾಖಾಧಿಕಾರಿಗಳು<br>ಮೊ: 9902530471 |

ಮಾನ್ಯ ಅಧ್ಯಕ್ಷರಿಂದ ಅನುಮೋದಿಸಿದೆ

19/11/2020

ನಿರ್ದೇಶಕರು(ಪರೀಕ್ಷೆಗಳು)
ಕರ್ನಾಟಕ ಶಾಲಾ ಪರೀಕ್ಷೆ ಮತ್ತು
ಮೌಲ್ಯನಿರ್ಣಯ ಮಂಡಲಿ.

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ (ಮುಂದಿನಕ್ರಮಕ್ಕಾಗಿ),
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಸಹಾಯಕನಿರ್ದೇಶಕರು, ಗಣಕಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ (ಮಂಡಲಿ ಅಂತರ್ಜಾಲದಲ್ಲಿ ಪ್ರಕಟಿಸಲು).
4. ಹೆಚ್ಚುವರಿ/ಕಚೇರಿಪ್ರತಿ.